RNU AIR DHARWAD

APRIL 05, 2026

# AKASHAVANI - DHARWAD

# PRADESH SAMACHARA (KANNADA) 07.05 A.M.

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

<><><>

- **ರಾಜ್ಯದ 60 ತಾಲೂಕುಗಳ,** 324 ಗ್ರಾಮಗಳಲ್ಲಿ, ಕುಡಿಯುವ ನೀರಿನ ಸಮಸ್ಯೆ –ಸಚಿವ, ಪ್ರಿಯಾಂಕ ಖರ್ಗೆ, ಮಾಹಿತಿ.
- **ಹಾವೇರಿ ಜಿಲ್ಲೆ, ಬ್ಯಾಡಗಿ ಕೃಷಿ ಉತ್ಪನ್ನ ಮಾರುಕಟ್ಟೆ:** 3 ಸಾವಿರದ 74 ಕೋಟಿ ರೂಪಾಯಿ, ಒಣ ಮೆಣಸಿನಕಾಯಿ ವಹಿವಾಟು, ದಾಖಲೆ.
- **ಕಂದಾಯ ಅದಾಲತ್:** ಚಿಕ್ಕಮಗಳೂರು ಜಿಲ್ಲೆ, ರಾಜ್ಯಕ್ಕೆ 3ನೇ ಸ್ಥಾನ.
- **ಇಂದು, ಈಸ್ಟರ್ ಸಂಡೆ:** ರಾಷ್ಟ್ರಪತಿ ಶುಭಾಶಯ.
- **26ನೇ ಆವೃತ್ತಿಯ,** ಕೊಡವ ಕೌಟುಂಬಿಕ ಹಾಕಿ; ಕೊಡಗು ಜಿಲ್ಲೆ, ನಾಪೋಕ್ಲುವಿನಲ್ಲಿ, ಇಂದು ಚಾಲನೆ.

<><><>

**ಈಗ ವಾರ್ತೆಗಳ ವಿವರ**

<><><>

**ರಾಜ್ಯದ 20 ಜಿಲ್ಲೆಗಳ, 60 ತಾಲೂಕುಗಳ ವ್ಯಾಪ್ತಿಯ,** 324 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಿದೆ ಎಂದು, ಗ್ರಾಮೀಣಾಭಿವೃದ್ಧಿ ಖಾತೆ ಸಚಿವ, ಪ್ರಿಯಾಂಕ ಖರ್ಗೆ ತಿಳಿಸಿದ್ದಾರೆ. ಫೇಸ್‌ಬುಕ್‌ನಲ್ಲಿ ಈ ಮಾಹಿತಿ ನೀಡಿ, ಒಟ್ಟು 76 ಗ್ರಾಮಗಳಿಗೆ, ಟ್ಯಾಂಕರ್‌ಗಳ ಮೂಲಕ ಹಾಗೂ 248 ಗ್ರಾಮಗಳಿಗೆ, 280 ಖಾಸಗಿ ಕೊಳವೆ ಬಾವಿಗಳನ್ನು ಬಾಡಿಗೆಗೆ ಪಡೆದು, ಜನರಿಗೆ ಹಾಗೂ ಜಾನುವಾರುಗಳಿಗೆ, ಕುಡಿಯುವ ನೀರು ಒದಗಿಸಲಾಗುತ್ತಿದೆ, ಎಂದಿದ್ದಾರೆ. ಕುಡಿಯುವ ನೀರಿನ, ತುರ್ತು ಕಾಮಗಾರಿಗಳನ್ನು ನಿರ್ವಹಿಸಲು, ಈಗಾಗಲೇ 60 ಕೋಟಿ ರೂಪಾಯಿ, ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿದೆ. ಮುಂದುವರಿದ ಕಾಮಗಾರಿಗಳ ಬಾಕಿ ಬಿಲ್ ಪಾವತಿಸಲು, ಹೆಚ್ಚುವರಿಯಾಗಿ 48 ಕೋಟಿ ರೂಪಾಯಿ, ಶುದ್ಧ ಕುಡಿಯುವ ನೀರಿನ ಘಟಕಗಳ ದುರಸ್ತಿಗಾಗಿ, 14 ಕೋಟಿ 50 ಲಕ್ಷ ರೂಪಾಯಿ ಒದಗಿಸಲಾಗಿದೆ ಎಂದು ಹೇಳಿದ್ದಾರೆ.

<><><>

**ರಾಜ್ಯದ 31 ಜಿಲ್ಲೆಗಳಲ್ಲಿ** 26 ಸಾವಿರದ 676 ಗ್ರಾಮಗಳಿದ್ದು, 57 ಸಾವಿರದ 883 ಜನವಸತಿ ಪ್ರದೇಶಗಳಿವೆ. 1 ಕೋಟಿ 1 ಲಕ್ಷ 30 ಸಾವಿರದ 798 ಮನೆಗಳಿವೆ.

<><><>

**ಹಾವೇರಿ ಜಿಲ್ಲೆ, ಬ್ಯಾಡಗಿ ತಾಲೂಕು,** ಬ್ಯಾಡಗಿ ಕೃಷಿ ಉತ್ಪನ್ನ ಮಾರುಕಟ್ಟೆ, 2025–26ನೇ ಸಾಲಿನಲ್ಲಿ, ಒಟ್ಟು 3 ಸಾವಿರದ 74 ಕೋಟಿ ರೂಪಾಯಿ ಮೊತ್ತದ, ಒಣ ಮೆಣಸಿನಕಾಯಿ ವಹಿವಾಟು ದಾಖಲಿಸಿ, ಗಮನ ಸೆಳೆದಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ, ಒಣ ಮೆಣಸಿನಕಾಯಿ ಆವಕ, ಈ ವರ್ಷ ಕಡಿಮೆ ಇದ್ದರೂ, 18 ಕೋಟಿ 44 ಲಕ್ಷ ರೂಪಾಯಿ ಮಾರುಕಟ್ಟೆ ಶುಲ್ಕ, ಸಂಗ್ರಹವಾಗಿದೆ. ರೈತಸ್ನೇಹಿ ವ್ಯಾಪಾರ ವ್ಯವಸ್ಥೆ, ಬ್ಯಾಡಗಿ ಒಣ ಮೆಣಸಿನಕಾಯಿ ಮಾರುಕಟ್ಟೆಯ ಜೀವಾಳವಾಗಿದೆ ಎಂದು, ಬ್ಯಾಡಗಿ ಕೃಷಿ ಉತ್ಪನ್ನ ಮಾರುಕಟ್ಟೆಯ ಕಾರ್ಯದರ್ಶಿ ಡಿ.ಪಿ. ಆದರ್ಶ, ಆಕಾಶವಾಣಿಗೆ ತಿಳಿಸಿದ್ದಾರೆ.

<><><>

**ಡಾ. ಡಿ.ಪಿ.ಆದರ್ಶ ಧ್ವನಿ 62 ಸೆಕೆಂದುಗಳು**

<><><>

**ಕಂದಾಯ ಅದಾಲತ್ ಆಂದೋಲನಕ್ಕೆ,** ಚಿಕ್ಕಮಗಳೂರು ಜಿಲ್ಲೆಯಲ್ಲಿ ಉತ್ತಮ ಸ್ಪಂದನೆ ದೊರೆತಿದೆ. 2025–26ನೇ ಆರ್ಥಿಕ ವರ್ಷದಲ್ಲಿ, ಎಲ್ಲ 9 ತಾಲೂಕುಗಳು, ಶೇಕಡ 100ರಷ್ಟು ಕಂದಾಯ ಸಂಗ್ರಹಿಸಿವೆ. ಶೇಕಡ 104 ದಶಾಂಶ 9–8 ರಷ್ಟು, ಕಂದಾಯ ಸಂಗ್ರಹದ, ಗುರಿ ಸಾಧಿಸಿ, ಚಿಕ್ಕಮಗಳೂರು ಜಿಲ್ಲೆ, ರಾಜ್ಯಕ್ಕೆ 3ನೇ ಸ್ಥಾನ ಪಡೆದಿದೆ ಎಂದು, ಜಿಲ್ಲಾ ಪಂಚಾಯಿತಿ ಸಿ.ಇ.ಓ. ಎಚ್.ಎಸ್. ಕೀರ್ತನಾ ತಿಳಿಸಿದ್ದಾರೆ. ಜಿಲ್ಲೆಯ 226 ಗ್ರಾಮ ಪಂಚಾಯಿತಿಗಳ ಪೈಕಿ, ಒಟ್ಟು 195 ಗ್ರಾಮ ಪಂಚಾಯಿತಿಗಳು, ಶೇಕಡ 100 ರಷ್ಟು ಹಾಗೂ 24 ಗ್ರಾಮ ಪಂಚಾಯಿತಿಗಳು, ಶೇಕಡ 90 ಕ್ಕಿಂತ ಹೆಚ್ಚು, ಕಂದಾಯ ಸಂಗ್ರಹಿಸಿವೆ ಎಂದರು.

<><><>

**ಬೆಂಗಳೂರಿನ ವಿಧಾನಸೌಧದ ಪೂರ್ವ ದ್ವಾರದ,** ಭವ್ಯ ಮೆಟ್ಟಿಲುಗಳ ಮೇಲೆ, ಇಂದು ಬೆಳಗ್ಗೆ 10 ಗಂಟೆಗೆ, ಬಾಬು ಜಗನಜೀವನ್ ರಾಮ್ ಅವರ ಜನ್ಮ ದಿನವನ್ನು, ಆಯೋಜಿಸಲಾಗಿದೆ ಎಂದು, ಸಮಾಜ ಕಲ್ಯಾಣ ಖಾತೆ ಸಚಿವ, ಎಚ್.ಸಿ. ಮಹದೇವಪ್ಪ ತಿಳಿಸಿದ್ದಾರೆ. ರಾಯಚೂರು ಜಿಲ್ಲೆ,ಆಶಾಪುರದ ಡಿಂಗ್ರಿ ನರಸಪ್ಪ, ಬೆಳಗಾವಿಯ ಸರಜೂ ಕಾಟಕರ, ಬೆಂಗಳೂರಿನ ಚಂದ್ರಮ್ಮ, ಮೈಸೂರಿನ ನಾರಾಯಣ ಹಾಗೂ ತುಮಕೂರಿನ ನರಸೀಯಪ್ಪ, ಪ್ರತಿಷ್ಠಿತ ಬಾಬು ಜಗಜೀವನ ರಾಮ್ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಈ ಪ್ರಶಸ್ತಿ, 5 ಲಕ್ಷ ರೂಪಾಯಿ ನಗದು, 20 ಗ್ರಾಂ ಚಿನ್ನದ ಪದಕವನ್ನು ಒಳಗೊಂಡಿದೆ. ಮುಖ್ಯಮಂತ್ರಿ ಪ್ರಶಸ್ತಿಗಳನ್ನು ಇಂದು ಪ್ರದಾನಿಸಿ, ಗೌರವಿಸಲಿದ್ದಾರೆ.

<><><>

**ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**

**(40 ಸೆಕೆಂದುಗಳು)**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಇಂದು ಯೇಸು ಕ್ರಿಸ್ತನ,** ಪುನರುತ್ಥಾನದ, ಈಸ್ಟರ್ ಸಂಡೆ. ಯೇಸು, ಶುಭ ಶುಕ್ರವಾರದಂದು ಶಿಲುಬೆಗೇರಿ, ಮರಣವನ್ನು ಜಯಿಸಿದ, ಸಂತೋ ದ ದಿನ. ನಾಡಿನಾದ್ಯಂತ, ಕ್ರೈಸ್ತ ಬಾಂಧವರು, ಈ ದಿನವನ್ನು ಶ್ರದ್ಧಾ, ಭಕ್ತಿಯ ಪ್ರಾರ್ಥನೆಯೊಂದಿಗೆ, ಸಂಭ್ರಮದ ಹಬ್ಬವಾಗಿ, ಆಚರಿಸುತ್ತಿದ್ದಾರೆ. ದಕ್ಷಿಣಕನ್ನಡ, ಉತ್ತರಕನ್ನಡ, ಗದಗ, ಬೆಳಗಾವಿ ಹಾಗೂ ಧಾರವಾಡದ ಚರ್ಚ್‌ಗಳಲ್ಲಿ, ಯೇಸು ಜನ್ಮವನ್ನು ಸಂಭ್ರಮಿಸಲು, ಗೋದಲಿಗಳನ್ನು ರೂಪಿಸಿ, ವಿಶೇಷವಾಗಿ ಅಲಂಕರಿಸಲಾಗಿದೆ. ವಿದ್ಯುದ್ದೀಪಗಳ ಅಲಂಕಾರ ವಿಶಿಷ್ಟವಾಗಿದೆ.

<><><>

**ರಾಷ್ಟ್ರಪತಿ ದ್ರೌಪದಿ ಮುರ್ಮು,** ಈಸ್ಟರ್ ಶುಭಾಶಯ ಸಂದೇಶ ನೀಡಿದ್ದು, "ಸಾಮರಸ್ಯ, ಶಾಂತಿ ಮತ್ತು ಸಹೋದರತ್ವವನ್ನು ಉತ್ತೇಜಿಸುವ, ನಮ್ಮ ಸಂಕಲ್ಪವನ್ನು ಈಸ್ಟರ್ ಸಂದರ್ಭದಲ್ಲಿ ನವೀಕರಿಸೋಣ ಮತ್ತು ಉತ್ತಮ ಭವಿ ್ಯಕ್ಕಾಗಿ ಒಟ್ಟಾಗಿ ಶ್ರಮಿಸೋಣ" ಎಂದಿದ್ದಾರೆ. ಹಲವು ಗಣ್ಯರು, ಈಸ್ಟರ್ ಸಂಡೆಯ ಶುಭಾಶಯ ಕೋರಿದ್ದಾರೆ.

<><><>

**ಧಾರವಾಡದ, ಹೆಬಿಕ್ ಸ್ಮಾರಕ ದೇವಾಲಯದ** ವಿಶ್ವಸ್ಥರಾದ, ಪ್ರೊಫೆಸರ್ ಐ.ಎಸ್. ಮಳೇಕರ, ಪ್ರದೇಶ ಸಮಾಚಾರಕ್ಕಾಗಿ, ಈಸ್ಟರ್ ಸಂಡೆ ವಿಶೇಷತೆ ತಿಳಿಸಿದ್ದಾರೆ.

<><><>

**ಪ್ರೊ. ಐ.ಎಸ್. ಮಳೇಕರ ಧ್ವನಿ 48 ಸೆಕೆಂದುಗಳು**

<><><>

**26ನೇ ಆವೃತ್ತಿಯ,** ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿಗೆ, ಕೊಡಗು ಜಿಲ್ಲೆ, ನಾಪೋಕ್ಲು ಗ್ರಾಮದಲ್ಲಿ, ಇಂದು ಬೆಳಗ್ಗೆ 11.30ಕ್ಕೆ, ಚಾಲನೆ ದೊರೆಯಲಿದೆ. 26 ವ ಗಳ ಇತಿಹಾಸದಲ್ಲಿ, 6ನೇ ಬಾರಿಗೆ, ನಾಪೋಕ್ಲು ಗ್ರಾಮದಲ್ಲಿ, ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿ ನಡೆಯುತ್ತಿರುವುದು, ವಿಶೇ ವಾಗಿದೆ. ಈ ಬಾರಿ ಚೇನಂಡ ಕುಟುಂಬದವರ ಆತಿಥ್ಯದಲ್ಲಿ, ಕೊಡವ ಹಾಕಿ ಅಕಾದೆಮಿ ಉಸ್ತುವಾರಿಯಲ್ಲಿ, ಕೊಡವ ಕುಟುಂಬಗಳ, 382 ಹಾಕಿ ತಂಡಗಳು, 1 ತಿಂಗಳ ಕಾಲ, ಪಂದ್ಯಾವಳಿಯಲ್ಲಿ ಪಾಲ್ಗೊಳ್ಳಲಿವೆ. ಮಹಿಳೆಯರ, 50 ಹಾಕಿ ತಂಡಗಳು ಸಹ ಭಾಗವಹಿಸಲಿದ್ದು, 30 ಸಾವಿರ ಪ್ರೇಕ್ಷಕರು ಹಾಕಿ ಪಂದ್ಯಾಟ ವೀಕ್ಷಿಸಲು ಅನುವಾಗುವಂತೆ, ವ್ಯವಸ್ಥೆ ಕೈಗೊಳ್ಳಲಾಗಿದೆ.

<><><>

**ಲೀಗ್ ಹಂತದ ಮೂರು** ಪಂದ್ಯಗಳಲ್ಲೂ, ಉತ್ತಮ ಆಟವಾಡಿದ ಮಂಡ್ಯ ವಿಶ್ವವಿದ್ಯಾಲಯದ ಮಹಿಳಾ ತಂಡ, ದಕ್ಷಿಣ ವಲಯ ಅಂತರ್ ವಿಶ್ವವಿದ್ಯಾಲಯಗಳ, ಮಹಿಳೆಯರ ಖೋ ಖೋ ಟೂರ್ನಿಯಲ್ಲಿ, ಚಾಂಪಿಯನ್ ಆಯಿತು. ಅಖಿಲ ಭಾರತ ವಿಶ್ವವಿದ್ಯಾಲಯಗಳ ಸಂಘದ ಆಶ್ರಯದಲ್ಲಿ, ದಾವಣಗೆರೆ ವಿಶ್ವವಿದ್ಯಾಲಯ ಆವರಣದಲ್ಲಿ ಜರುಗಿದ, ಮಹಿಳೆಯರ ಖೋ ಖೋ ಪಂದ್ಯಗಳಲ್ಲಿ, ಮಂಗಳೂರು ವಿಶ್ವವಿದ್ಯಾಲಯ, ರನ್ನರ್ಸ್ ಅಪ್ ಆಯಿತು. ಮೈಸೂರು ವಿಶ್ವವಿದ್ಯಾಲಯ ತಂಡ, ಮೂರನೇ ಸ್ಥಾನ ಹಾಗೂ ಕೇರಳದ ಕ್ಯಾಲಿಕಟ್ ವಿಶ್ವವಿದ್ಯಾಲಯ ತಂಡ, ನಾಲ್ಕನೇ ಸ್ಥಾನ ಪಡೆಯಿತು.

<><><>

**ಬೆಳಗಾವಿಯ ಸೇನಾ ನೇಮಕಾತಿ ಕಚೇರಿ** ಹಾಗೂ ಬೆಂಗಳೂರಿನ, ವಲಯ ನೇಮಕಾತಿ ಕಚೇರಿ, ಅಗ್ನಿವೀರ ನೇಮಕಾತಿಗಾಗಿ, ಆನ್‌ಲೈನ್ ನೋಂದಣಿ ಅವಧಿಯನ್ನು, ಈ ತಿಂಗಳ 10ನೇ ತಾರೀಖಿನ ವರೆಗೆ ವಿಸ್ತರಿಸಿದೆ. ನೇರ ನೇಮಕಾತಿ ವಿಭಾಗದ, ಕರ್ನಲ್ ಎ.ಕೆ. ಉಪಾಧ್ಯಾಯ ಈ ಮಾಹಿತಿ ನೀಡಿ, ಬೆಳಗಾವಿ, ಬೀದರ, ಕಲಬುರಗಿ, ಕೊಪ್ಪಳ, ರಾಯಚೂರು ಹಾಗೂ ಯಾದಗಿರಿ ಜಿಲ್ಲೆಗಳ, ಅರ್ಹ ಪುರುಷ ಅಭ್ಯರ್ಥಿಗಳು, www.joinindianarmy.nic.in ಜಾಲತಾಣದಲ್ಲಿ, ಹೆಸರು ನೋಂದಾಯಿಸಲು, ಕೋರಿದ್ದಾರೆ.

<><><>

**ಡೆಹರಾಡೂನ್, ರಾಷ್ಟ್ರೀಯ ಭಾರತೀಯ ಮಿಲಿಟರಿ** ಕಾಲೇಜು ಪ್ರವೇಶ ಪರೀಕ್ಷೆಗೆ, ಅರ್ಜಿ ಸಲ್ಲಿಸುವ ಅವಧಿಯನ್ನು, ಈ ತಿಂಗಳ 15ರ ವರೆಗೆ ವಿಸ್ತರಿಸಲಾಗಿದೆ ಎಂದು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ, ಪ್ರಭಾರ ನಿರ್ದೇಶಕ, ಫ್ಲೈಟ್ ಲೆಫ್ಟಿನೆಂಟ್ ಎಂ.ಎಸ್.ಲೋಲಾಕ್ಷ ತಿಳಿಸಿದ್ದಾರೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ರಾಜ್ಯದ 60 ತಾಲೂಕುಗಳ,** 324 ಗ್ರಾಮಗಳಲ್ಲಿ, ಕುಡಿಯುವ ನೀರಿನ ಸಮಸ್ಯೆ –ಸಚಿವ, ಪ್ರಿಯಾಂಕ ಖರ್ಗೆ, ಮಾಹಿತಿ.
- **ಹಾವೇರಿ ಜಿಲ್ಲೆ, ಬ್ಯಾಡಗಿ ಕೃಷಿ ಉತ್ಪನ್ನ ಮಾರುಕಟ್ಟೆ;** 3 ಸಾವಿರದ 74 ಕೋಟಿ ರೂಪಾಯಿ, ಒಣ ಮೆಣಸಿನಕಾಯಿ ವಹಿವಾಟು, ದಾಖಲೆ.
- **ಕಂದಾಯ ಅದಾಲತ್;** ಚಿಕ್ಕಮಗಳೂರು ಜಿಲ್ಲೆ, ರಾಜ್ಯಕ್ಕೆ 3ನೇ ಸ್ಥಾನ.
- **ಇಂದು, ಈಸ್ಟರ್ ಸಂಡೆ;** ರಾಷ್ಟ್ರಪತಿ ಶುಭಾಶಯ.
- **26ನೇ ಆವೃತ್ತಿಯ,** ಕೊಡವ ಕೌಟುಂಬಿಕ ಹಾಕಿ; ಕೊಡಗು ಜಿಲ್ಲೆ, ನಾಪೋಕ್ಲುವಿನಲ್ಲಿ, ಇಂದು ಚಾಲನೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>